# ಲೀಲಾವತಿ ಅವರ ಮಾತಿಗೆ ಸಿಗರೇಟ್ ಸಹವಾಸ ಬಿಟ್ಟೆ...

ಕನ್ನಡ ಚಿತ್ರರಂಗದಲ್ಲಿ ಆರು ದಶಕಗಳಿಂದಲೂ ಸಕ್ರಿಯರಾಗಿರುವ ನಟ ಬೆಂಗಳೂರು ನಾಗೇಶ್ ಪೋಷಕ ಪಾತ್ರಗಳಿಂದ ಜನಮನ್ನಣೆಗೆ ಭಾಜನರಾದವರು. ಚಂದನವನದ ಅನೇಕ ಏಳುಬೀಳುಗಳಿಗೆ ಸಾಕ್ಷಿಯಾಗಿರುವ ಅವರು ಮತ್ತು ರಾಜ್ ಸಹೋದರ ವರದಪ್ಪ 40 ವರ್ಷಕಾಲ ಸ್ನೇಹಿತರಾಗಿದ್ದವರು. ಇತ್ತೀಚೆಗಷ್ಟೇ ವರದರಾಜು ಪ್ರಶಸ್ತಿಗೆ ಭಾಜನರಾದ ನಾಗೇಶ್, ತಮ್ಮ ಸಿನಿಮಾ ಜೀವನದ ಕೆಲವು ನೆನಪುಗಳನ್ನು 'ಸುಧಾ' ಜೊತೆ ಹಂಚಿಕೊಂಡಿದ್ದಾರೆ.

**ಮಂಜುಶ್ರೀ ಎಂ. ಕಡಕೋಳ**
ಫೋಟೊ: ಕಿಶೋರ್ ಕುಮಾರ್ ಬೋಳಾರ್



ಬೆಂಗಳೂರು ನಾಗೇಶ್ ಸಂದರ್ಶನ

ಹಿರಿಯ ನಟ ಬೆಂಗಳೂರು ನಾಗೇಶ್ ಅವರಿಗೀಗ 86 ವರ್ಷ. ಬಾಲಕೃಷ್ಣ, ಜಿ.ವಿ. ಅಯ್ಯರ್, ರಾಜ್‌ಕುಮಾರ್ ಅವರಾದಿಯಾಗಿ ಇಂದಿನ ರಕ್ಷಿತ್ ಶೆಟ್ಟಿ ತನಕ ಹಬ್ಬಿಕೊಂಡಿರುವ ಅವರ ನಟನೆಯ ಬದುಕಿಗೆ ಆರು ದಶಕಗಳ ಸಂಭ್ರಮ.

ಹಾಸನ ಜಿಲ್ಲೆಯ ಸಣ್ಣ ಹಳ್ಳಿಯೊಂದರಲ್ಲಿ ಜನಿಸಿದ ನಾಗೇಶ್ ಅವರ ತಂದೆ ಮಾಧ್ಯಮಿಕ ಶಾಲೆಯ ಮೇಷ್ಟ್ರಾಗಿದ್ದವರು. ಕನ್ನಡದ ವ್ಯಾಕರಣವನ್ನು ಮನೆಯಲ್ಲೇ ಸುಲಲಿತವಾಗಿ ಕಲಿತ ನಾಗೇಶ್, ಮುಂದೆ ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಪೂರೈಸಿದರು. ಸಿನಿಮಾದ ಸೆಳೆತ ಹೆಚ್ಚಾಗಿ ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ಸಿನಿಮಾಟೊಗ್ರಫಿಯಲ್ಲಿ ಡಿಪ್ಲೊಮಾ ಪದವಿಯನ್ನೂ ಪಡೆದರು. ಹಿರಿಯ ನಟ ಬಾಲಕೃಷ್ಣ ಅವರ ಭೇಟಿ ನಾಗೇಶ್ ಅವರಿಗೆ ಮದ್ರಾಸಿನ ದಾರಿ ತೋರಿಸಿತು. ಬಾಲಣ್ಣ ಅವರಿಂದಾಗಿ ಜಿ.ವಿ. ಅಯ್ಯರ್ ಅವರ ಒಡನಾಟಕ್ಕೆ ಬಂದ ನಾಗೇಶ್ ಮತ್ತೆ ಹಿಂತಿರುಗಿ ನೋಡಲಿಲ್ಲ.

ಸಿನಿಮಾ ಜಗತ್ತಿನಲ್ಲಿ ವಿದ್ಯಾವಂತರು ಕಮ್ಮಿ ಇದ್ದ ಕಾಲದಲ್ಲಿ ನಾಗೇಶ್ ಅವರಿಗೆ ಸಹಾಯಕ ನಿರ್ದೇಶಕನಾಗುವ ಯೋಗ. ಕನ್ನಡದ ಮೇರು ನಟ ರಾಜ್‌ಕುಮಾರ್ ಅವರ ಜತೆಗೆ 22 ಸಿನಿಮಾಗಳಲ್ಲಿ ನಟಿಸುವ ಸುಯೋಗವೂ ಒದಗಿಬಂತು. 'ಸತ್ಯ ಹರಿಶ್ಚಂದ್ರ' ಚಿತ್ರದಲ್ಲಿ ರಾಜ್ ಜೊತೆಗೆ ಬಣ್ಣ ಹಚ್ಚಿದ ನಾಗೇಶ್, ನಂತರ 'ಭಲೇ ಹುಚ್ಚ', 'ತುಂಬಿದ ಕೊಡ', 'ಬಂಗಾರದ ಮನುಷ್ಯ', 'ಗಂಧದ ಗುಡಿ', 'ಮಯೂರ' ಸೇರಿದಂತೆ ಅನೇಕ ಸಿನಿಮಾಗಳಲ್ಲಿ ರಾಜ್ ಅವರೊಂದಿಗೆ ನಟಿಸಿದರು. 'ಗಂಧದ ಗುಡಿ' ಮತ್ತು 'ಮಯೂರ' ಸಿನಿಮಾಗಳಿಗೆ ಸಹ ನಿರ್ದೇಶಕನಾಗಿಯೂ ಕೆಲಸ ಮಾಡಿದ ಅನುಭವ ಅವರದ್ದು.

### ಕೌಟುಂಬಿಕ ವಾತಾವರಣದ ಆ ದಿನಗಳು...

ಆಗ ಚಿತ್ರರಂಗದಲ್ಲಿ ಕಡಿಮೆ ಸಂಖ್ಯೆಯ ಕಲಾವಿದರಿದ್ದರು. ಪ್ರತಿಯೊಂದಕ್ಕೂ ಮದ್ರಾಸಿಗೆ ಹೋಗಬೇಕಾಗುತ್ತಿತ್ತು. ಹಾಗಾಗಿ, ಪ್ರತಿ ಸಿನಿಮಾದಲ್ಲೂ ಬಹುತೇಕ ಎಲ್ಲ ಕಲಾವಿದರಿಗೆ ಅವಕಾಶ ದೊರೆಯುತ್ತಿತ್ತು. ಆಗ ಎಲ್ಲರೂ ಒಟ್ಟಿಗೆ ಪ್ರಯಾಣಿಸುತ್ತಿದ್ದೆವು, ಊಟ ಮಾಡುತ್ತಿದ್ದೆವು, ಒಟ್ಟಾಗಿ ಇರುತ್ತಿದ್ದೆವು. ಒಂದು ರೀತಿಯ ಕೌಟುಂಬಿಕ ವಾತಾವರಣ ಇರುತ್ತಿತ್ತು. ಸಂಭಾವನೆಗಿಂತ ಪರಸ್ಪರ ಕಷ್ಟ ಸುಖದಲ್ಲಿ ಭಾಗಿಯಾಗುತ್ತಿದ್ದೆವು ಎಂದು ನೆನಪಿನ ಸುರುಳಿ ಬಿಚ್ಚಿಡುತ್ತಾರೆ ನಾಗೇಶ್.